ಈ ಮೂರು ತಿಂಗಳಿನಿಂದ ವಿರಹದಿಂದ ರಾಜಶೇಖರ ಬರೆದ ಕಾಗದಗಳೆಲ್ಲಾ ಮನಸಿನ ಪರದೆಯ ಮೇಲೆ ಪ್ರತ್ಯಕ್ಷವಾಗಿ ಗೊತ್ತಿಲ್ಲದೆಯೇ ತುಟಿಯಂಚಿನ ಮೇಲೆ ಕಿರುನಗೆ ಕುಣಿಯುತ್ತಿದೆ. ಇನ್ನೂ ಸ್ವಲ್ಪ ಹೊತ್ತಿಗೆ ಬೆಳದಿಂಗಳು ಬಿಸಿಯಾಗುತ್ತದೆನಿಸುವುದರೊಳಗೆ ಪ್ರಯತ್ನಪೂರ್ವಕವಾಗಿ ಮನಸ್ಸನ್ನು ಹಿಡಿದಿಟ್ಟುಕೊಂಡಳು. ಆಕೆಗೆ ಬೆನ್ನಿನ ಕೆಳಗೆ ಹೆಚ್ಚುಕಡಿಮೆ ಮಣ್ಣಿನ ಹೆಂಟೆಗಳು ಚುಚ್ಚಿದಂತಾಗಿ ತನ್ನ ತಂದೆಯ ಮನೆ ಪರಿಸ್ಥಿತಿಯೊಳಕ್ಕೆ ಬಂದಳು. ಮಣ್ಣಿನ ಮಾಳಿಗೆಗೆ ಹಾಕಿದ ಸವಳು ಮಣ್ಣು ಮಳೆಯಿಲ್ಲದ್ದರಿಂದ ಕರಗದೆ ಹೆಂಟೆಗಳು ಹಾಗೆ ಉಳಿದಿವೆ. ಚಾಪೆಯ ಮೇಲೆ ಜಮಖಾನ ಹಾಕಿಕೊಂಡಿದ್ದರೂ ಬೆನ್ನಿನ ಕೆಳಗೆ ತಗ್ಗುದಿನ್ನೆಯಿದೆ.

ಆಕೆಗೆ ಆಗ ತನ್ನ ಮದುವೆಗೆ ತಂದೆ ಮಾಡಿದ ಸಾಲ ನೆನಪಾಯಿತು. ಅದನ್ನು ತೀರಿಸುವ ಸಲುವಾಗಿಯೇ ಆಸೆಯಿಂದ ಹೆಚ್ಚು ಹತ್ತಿ ಬಿತ್ತಿದ್ದ ಹೊಲ ನೆನಪಾಯಿತು. ಆ ಹತ್ತಿ ಹೊಲ ಬೆಳೆಯಬೇಕೆಂದರೆ ಬೀಳಬೇಕಾದ ಮಳೆಯ ನೆನಪಾಯಿತು.

'ಮಳೆ ಬರಬೇಕು ದೇವರೇ... ಮಳೆ ಬರಬೇಕು' ಎಂದುಕೊಳ್ಳುತ್ತಾ ಬಲವಂತವಾಗಿ ಕಣ್ಣುಮುಚ್ಚಿಕೊಂಡು ನಿದ್ರೆಗೆ ಜಾರಿದಳು ಭಾರ್ಗವಿ.

★★★

'ನಾಳೆ ಶುಕ್ರವಾರ ಬಿಟ್ಟು ಮುಂದಿನ ಶುಕ್ರವಾರ ಬಾಳ ಒಳ್ಳೇದಿನಂತೆ ಸ್ವಾಮೇರು ಹೇಳಿದ್ರು' ಎಂದ ಅನಂತರೆಡ್ಡಿ ಹೆಂಡತಿಯೊಂದಿಗೆ ಮರುದಿನ ಬೆಳಗ್ಗೆ.

'ಹಂಗಾದ್ರೆ ಅಳಿಯಾಗ ಈಗಲೇ ಕಾಗದ ಬರಿ ಶುಕ್ರವಾರ ಜಲ್ದಿ ಬಾ ಅಂತ. ಹತ್ತು ಗಂಟೆಗೆ ಪಾಲೆಂ ಹತ್ತಿರ ಗಾಡಿ ಕಳಸ್ತುವಿ ಅಂತ ಕೂಡ ಬರಿ' ಎಂದಳು ಸುಶೀಲ.

ತಂದೆ ತಾಯಿಗಳ ಸಂಭಾಷಣೆಯು ಕೇಳುತ್ತಲೇ ಇದೆ ಭಾರ್ಗವಿಗೆ. ಮನಸ್ಸಲ್ಲಿಯೇ ಬಾಕಿ ದಿನಗಳನ್ನು ಲೆಕ್ಕ ಹಾಕಿದಳು. ಈ ಹೊತ್ತು ಬುಧವಾರ. ಬುಧವಾರ ಕಳೆದರೆ ಗುರುವಾರದಿಂದ ಗುರುವಾರಕ್ಕೆ ಎಂಟು ದಿನ!

'ಇನ್ನೊಂದು ವಿಷಯಾನು ಹೇಳಿರು. ಈ ಮೂಹರ್ತಕ್ಕೆ ಇಬ್ಬರ ಹೆಸರಿನ ಬಲ ಕೂಡ ಚೆನ್ನಾಗಿದೆಯಂತೆ. ಇದು ತಪ್ಪಿದರೆ ಇಂಥ ಒಳ್ಳೆ ಮುಹೂರ್ತಕ್ಕಾಗಿ ಎರಡು ತಿಂಗಳು ಕಾಯಬೇಕಂತೆ!'



'ಅಯ್ಯೋ, ಇಂತ ಒಳ್ಳೆ ಮುಹೂರ್ತ ಯಾಕ ತಪ್ಪಸ್ತೀವಿ. ನಮಗ ಅಳಿಯ ಬಂದ್ರೆ ಸಾಕು. ರಜ ಸಿಗದಿಲ್ಲಂತ ಆತ ಬರದಿದ್ದರೆ ಬಾಳ ಕಷ್ಟ. ಇಂತ ವಿಷಯ ಬರಲೇಬೇಕಂತ ಕಾಗದ ಬರಿಬೇಕು ಮತ್ತೆ.'

'ಅವರು ಬರದೇ ಇರ್ತಾರ. ಶುಕ್ರವಾರ ಮುಂಜಾನೆವರಿಗೆ ತಡಿಯದೆ ಗುರುವಾರ ರಾತ್ರಿಗೇ ಬರ್ತಾರೇನೋ' ಎಂದು ಗಂಡನನ್ನು ನೆನಸಿಕೊಂಡು ಮನದೊಳಗೆ ನಕ್ಕಳು ಭಾರ್ಗವಿ.

★★★

ಮಳೆ ಬರುವ ಮಾತು ಹಾಗಿರಲಿ, ಬಿಸಿಲು ತೀವ್ರವಾಗಿ ರೋಹಿಣಿಕಾರ್ತಿ ಬಿರುಬಿಸಿಲಿರುವುದರಿಂದ ಬೆಳೆಗಳ ಪರಿಸ್ಥಿತಿ